# ನೆನಪಿನ ಅಂಗಳದಲ್ಲಿ ಅಭಿನಯ ಸರಸ್ವತಿ



ಸರೋಜಾದೇವಿ ಬಾಲ್ಯದಲ್ಲಿಯೇ ರಂಗದ ರಂಗಿಗೆ ಆಕರ್ಷಿತರಾಗಿದ್ದರು. ಗಾಯನ ಮತ್ತು ನೃತ್ಯ ಪ್ರೀತಿ ಅವರಲ್ಲಿ ಹುಟ್ಟಿಸಿದ ಭರವಸೆ ಮೂರು ದಶಕಗಳ ಕಾಲ ಸಿನಿಮಾರಂಗದಲ್ಲಿ ನಾಯಕಿಯಾಗಿ ಮೆರೆಸಿತು. ಏಳು ದಶಕಗಳ ಕಾಲ ಸಿನಿ ಜಗತ್ತಿಗೆ ನಕ್ಷತ್ರದ ಹೊಳಪನ್ನು ತುಂಬಿದ ತಾರೆ ಮಿಂಚಿ ಈಗ ಮರೆಯಾಗಿದೆ.

■ ರಾಘವೇಂದ್ರ ಕೆ. ತೊಗರ್ಸಿ

'ಅಭಿನಯ ಸರಸ್ವತಿ' ಅಭಿದಾನದಿಂದ ಪ್ರಸಿದ್ಧರಾದ ಬಿ. ಸರೋಜಾದೇವಿ ಮೂರು ದಶಕಗಳ ಚತುರ್ಭಾಷೆ ಕಾಲ ಸಿನಿಮಾದಲ್ಲಿ ನಾಯಕಿಯಾಗಿ ಮಿಂಚಿದರು. ಸುಮಾರು 70 ವರ್ಷಗಳ ಕಾಲ ಸಿನಿಮಾರಂಗದ ನಂಟನ್ನು ಬೆಸೆದುಕೊಂಡಿದ್ದರು. ಬಹುಭಾಷಾ ಚಿತ್ರರಂಗದಲ್ಲಿ ಬಹುಬೇಡಿಕೆಯನ್ನು ದೀರ್ಘಕಾಲ ಉಳಿಸಿಕೊಂಡ ಕನ್ನಡದ ಅಪೂರ್ವ ನಟಿ. ಚಂದನವನವನ್ನು ದಟ್ಟವಾಗಿ ಆವರಿಸಿದ್ದ ಅವರು, ತಮಿಳು ಚಿತ್ರರಂಗದಲ್ಲಿ 'ಕನ್ನಡದ ಗಿಳಿ' ಎಂಬ ಖ್ಯಾತಿಯನ್ನು ಗಳಿಸಿದ್ದರು.

ದೇಶವ್ಯಾಪಿ ಖ್ಯಾತಿ ಹೊಂದಿದ್ದರೂ ತಮ್ಮ ಮೂಲದ ಸೆಲೆಯನ್ನೂ ಕೊನೆಯ ತನಕ ಪೋಷಿಸಿದರು. ಅದಕ್ಕೆ ಕುರುಹು ಎನ್ನುವಂತೆ ಅವರು ಅಗಲಿದ ದಿನ ಅವರೂರ ಮನೆಯ ಗೋಡೆಯ ಮೇಲೆ ಅಭಿಮಾನಿಗಳು 'ಮರೆಯಾದ ಬೆಳ್ಳಿತೆರೆಯ ಅಭಿನೇತ್ರಿ, ದಶವಾರದ ಅಭಿನಯ ಬೊಂಬೆ' ಎಂದು ಬರೆದಿದ್ದರು. ಅದು ಅವರ ಅಭಿನಯ ಮತ್ತು ಜನಪ್ರಿಯತೆಯ ಬಿಂಬದಂತೆ ಕಾಣಿಸುತ್ತಿತ್ತು.

ದಕ್ಷಿಣ ಭಾರತದ ಬಹುಬೇಡಿಕೆಯ ತಾರೆ ಸರೋಜಾದೇವಿ ಜನವರಿ 7, 1938ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಭೈರಪ್ಪ, ತಾಯಿ ರುದ್ರಮ್ಮ. ಬೆಂಗಳೂರಿನಲ್ಲಿಯೇ ಶಿಕ್ಷಣ ಪೂರೈಸಿದ ಅವರಿಗೆ ತಮ್ಮ ಮೂಲದ ಬಗ್ಗೆ ಅಪಾರ ಸೆಳೆತ ಇತ್ತು. ಅವರ ಪೂರ್ವಿಕರ ಊರಾದ ಚನ್ನಪಟ್ಟಣ ತಾಲ್ಲೂಕಿನ ದಶವಾರದಲ್ಲಿ ಮಣ್ಣಾದರು. ಬಾಲ್ಯದಲ್ಲಿಯೇ ನೃತ್ಯ ಸಂಗೀತದ ಮೇಲೆ ಅಪಾರ ಮೋಹ ಹುಟ್ಟಿತ್ತು. ಅದು ಅವರನ್ನು ಕನ್ನಡ ರಜತ ಪರದೆಗೆ ಕೈ ಹಿಡಿದು ಕರೆತಂದಿತು. 1953ರಲ್ಲಿ 'ಶ್ರೀರಾಮ ಪೂಜಾ' ಸಿನಿಮಾದಲ್ಲಿ ಪುಟ್ಟ ಅವಕಾಶ ದಟ್ಟ ಪ್ರತಿಭೆಯೊಂದು ಅವತರಿಸಲು ಕಾರಣವಾಯಿತು. 1955ರಲ್ಲಿ 'ಮಹಾಕವಿ ಕಾಳಿದಾಸ' ಚಿತ್ರಕ್ಕೆ ನಾಯಕಿಯಾಗಿ ಮೊದಲ ಬಾರಿಗೆ ಪರಿಚಯ ಆದರು. ಆ ಸಿನಿಮಾಕ್ಕೆ ರಾಷ್ಟ್ರಪ್ರಶಸ್ತಿಯೂ ಲಭಿಸಿತು.



ಬಹುಭಾಷೆಯಲ್ಲಿ ತಾರಾ ಮೆರುಗನ್ನು ತುಂಬಿದ ಕನ್ನಡತಿ ಸರೋಜಾದೇವಿ ಅವರ ಕಲಾ ಸಾಧನೆಯನ್ನು ಗುರುತಿಸಿ, ಪ್ರಜಾವಾಣಿ 2024ರ 'ಸಿನಿ ಸಮ್ಮಾನ' ಕಾರ್ಯಕ್ರಮದಲ್ಲಿ 'ಜೀವಮಾನ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಿತು.